# ಕರ್ನಾಟಕ ಲೋಕಾಯುಕ್ತ

**ಕಂಪ್ಲೆಂಟ್/ಉಪಲೋಕ್/ಬಿಡಿ/1975/2022**
**ಪಿ.ಎ.ಆರ್.ಇ-5 (ಮಂಡನಾಧಿಕಾರಿಗಳ ಶಾಖೆ).**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 20/03/2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** **ಶ್ರೀ ಹನುಮಂತಪ್ಪ ಹಂಚಿನಮನೆ, ತಂದೆ ನಾಗಪ್ಪ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚನ್ನೇಶಪುರ ಗ್ರಾಮ ಪಂಚಾಯತಿ/ ಪ್ರಭಾರ ಹಿರೇಮಳಲಿ ಗ್ರಾಮ ಪಂಚಾಯಿತಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ,** ಇವರು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

****

ಆರಕ್ಷಕ ನಿರೀಕ್ಷಕರು, ಎಸಿಬಿ ಪೋಲಿಸ್ ಠಾಣೆ, ದಾವಣಗೆರೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ ಹನುಮಂತಪ್ಪ ಹಂಚಿನಮನೆ, ತಂದೆ ನಾಗಪ್ಪ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚನ್ನೇಶಪುರ ಗ್ರಾಮ ಪಂಚಾಯತಿ/ ಪ್ರಭಾರ ಹಿರೇಮಳಲಿ ಗ್ರಾಮ ಪಂಚಾಯಿತಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ ರಂಗನಾಥ ಬಿ.ಹೆಚ್. ಬಿನ್ ಲೇಟ್ ಹನುಮಂತಪ್ಪ, ಮಾವಿನಕಟ್ಟೆ ಗ್ರಾಮ, ಚನ್ನಗಿರಿ ತಾಲ್ಲೂಕು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರು ಮಾವಿನಕಟ್ಟೆ ಗ್ರಾಮದ, ಖಾತಾ ನಂ:167, ಅಳತೆ 14*100 ಅಡಿ ಇದರಲ್ಲಿರುವ ಹಂಚಿನ ಮನೆಯನ್ನು ಮಂಗಳಾಬಾಯಿ ಇವರಿಂದ ಖರೀದಿ ಮಾಡಲು ಒಪ್ಪಂದ ಮಾಡಿಕೊಂಡಿದ್ದು, ಖರೀದಿ ಪತ್ರ ಮಾಡಿಕೊಳ್ಳಲು ಇ-ಸ್ವತ್ತಿಗೆ ಅರ್ಜಿ ಸಲ್ಲಿಸಿದ್ದು, ಇ-ಸ್ವತ್ತು ಮಾಡಿಕೊಡಲು ಎದುರುದಾರರು ರೂ. 2000/- ಲಂಚಕ್ಕೆ ಬೇಡಿಕೆ ಇಟ್ಟ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ದಿ: 20/10/2020 ರಂದು ದಾವಣಗೆರೆ ಎಸಿಬಿ ಪೋಲಿಸ್ ಠಾಣಾ ಗುನ್ನಾ ನಂ. 05/2020 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7ಎ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸಾರ್ವಜನಿಕ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ರೂ. 2,000/- ಲಂಚ ಪಡೆದುಕೊಂಡು ರೆಡ್ ಹ್ಯಾಂಡ್ ಆಗಿ ಸಿಕ್ಕಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ

ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರ ಅನ್ವಯ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

**2) ಪ್ರಕರಣದ ಸಂಕ್ಷಿಪ್ತ ಸಾರಾಂಶ:**

i) ದೂರುದಾರರಾದ **ಶ್ರೀ ರಂಗನಾಥ ಬಿ.ಹೆಚ್. ಬಿನ್ ಲೇಟ್ ಹನುಮಂತಪ್ಪ, ಮಾವಿನಕಟ್ಟೆ ಗ್ರಾಮ, ಚನ್ನಗಿರಿ ತಾಲ್ಲೂಕು,** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರು ಮಾವಿನಕಟ್ಟೆ ಗ್ರಾಮದ ನಿವೇಶನದ ಖಾತಾ ನಂ:167, ಅಳತೆ 14*100 ಅಡಿ ಇದರಲ್ಲಿರುವ ಹಂಚಿನ ಮನೆಯನ್ನು ಮಂಗಳಾಬಾಯಿ ಇವರಿಂದ ಖರೀದಿ ಮಾಡಲು ಒಪ್ಪಂದ ಮಾಡಿಕೊಂಡಿದ್ದು, ಖರೀದಿ ಪತ್ರ ಮಾಡಿಸಿಕೊಳ್ಳಲು ಇ-ಸ್ವತ್ತು ಮಾಡಬೇಕಾಗಿದ್ದರಿಂದ ದಿನಾಂಕ:12/10/2020 ರಂದು ಮಂಗಳಾಬಾಯಿಯವರು ದೂರುದಾರೊಂದಿಗೆ ಬಂದು ಇ-ಸ್ವತ್ತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ದಿನಾಂಕ:13/10/2020 ರಂದು ಎದುರುದಾರರು ದೂರುದಾರರಿಗೆ ಫೋನ್ ಮಾಡಿ ಇ-ಸ್ವತ್ತು ಮಾಡಿಕೊಡಲು ರೂ. 2000/- ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರು ಹಣವನ್ನು ಎದುರುದಾರರ ಬ್ಯಾಂಕ್ ಖಾತೆಗೆ ಹಾಕುವುದಾಗಿ ಹೇಳಿದಾಗ, ಎದುರುದಾರರು ತಮ್ಮ ಕಚೇರಿಗೆ ಬಂದು ಹಣ ನೀಡುವಂತೆ ತಿಳಿಸಿರುತ್ತಾರೆ, ರಸೀದಿ ಕೇಳಲಾಗಿ ಎದುರುದಾರರು ರಸೀದಿ ಕೊಡುವುದಿಲ್ಲವೆಂದು ನುಡಿದಿರುತ್ತಾರೆ. ಇದೆಲ್ಲವನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿನಾಂಕ:21/10/2020 ರಂದು ದಾವಣಗೆರೆ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.05/2020 ರಲ್ಲಿ, ಭ್ರಷ್ಟಾಚಾರ ನಿಗ್ರಹ ಕಾಯ್ದೆ ಕಲಂ 7ಎ (ಎ) ಅಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ಎಂ.ವಿ. ವಸಂತಕುಮಾರ (ನೆರಳುಸಾಕ್ಷಿ) 2) ಅಸ್ಮತ್ತಾಬಿ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ಲಂಚ ನೀಡಲು ತಂದ ರೂ. 2,000/- (500x3) & (100x5) ಗಳನ್ನು ಹಾಗೂ

ಮೊಬೈಲ್‌ನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಮೊಬೈಲಿನ ಮೆಮೊರಿ ಕಾರ್ಡ್‌ನಲ್ಲಿ ರೆಕಾರ್ಡ ಆಗಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಲಿಪಿಕರಿಸಿ ಕಂಪ್ಯೂಟರ್ ಮೂಲಕ ಸಿ.ಡಿ. ಗೆ ವರ್ಗಾಯಿಸಿಕೊಂಡಿರುತ್ತಾರೆ. ದೂರುದಾರರು ಹಾಜರುಪಡಿಸಿದ ನೋಟುಗಳ ನಂಬರುಗಳನ್ನು ಪಂಚರು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ಪೊಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚಸಾಕ್ಷಿ-2 ಅಸ್ಮತ್ತಾಬಿ ಇವರ ಮೂಲಕ ದೂರುದಾರರ ಶರ್ಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಪಂಚ-2 ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ವಸಂತಕುಮಾರ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ತಲೆ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ ಮಾಡಿಕೊಳ್ಳಲು ದೂರುದಾರರಿಗೆ ವಾಯ್ಸ್ ರೆಕಾರ್ಡರ್ ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 21/10/2020 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.00 ಘಂಟೆಯವರೆಗೆ ದಾವಣಗೆರೆ ಎಸಿಬಿ ಪೊಲೀಸ್ ಠಾಣೆಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ಎದುರುದಾರರಿಗೆ ಫೋನ್ ಮಾಡಲಾಗಿ ಎದುರುದಾರರು ಕೆಲಸ ನಿಮಿತ್ತ ಬೇರೆ ಊರಿನಲ್ಲಿ ಇರುವುದರಿಂದ ನಾಳೆ ಬರುವಂತೆ ತಿಳಿಸಿರುತ್ತಾರೆ. ಆದಕಾರಣ, ಹಣವನ್ನು ದೂರುದಾರರ ಸುಪರ್ಧಿಯಲ್ಲಿಯೇ ಇಟ್ಟುಕೊಳ್ಳುವಂತೆ ತಿಳಿಸಿ, ನಾಳೆ

ಅಂದರೆ ದಿ:22/10/2020 ರಂದು ಪೋಲೀಸ್ ಠಾಣೆಗೆ ಬರಲು ಸೂಚಿಸಿ, ಆ ಕುರಿತಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ.

iii) ತನಿಖಾಧಿಕಾರಿಯ ಸೂಚನೆಯಂತೆ ದಿನಾಂಕ:22/10/2020 ರಂದು ಪಂಚರು ಠಾಣೆಗೆ ಬಂದು ವರದಿ ಮಾಡಿಕೊಂಡಿದ್ದು, ದೂರುದಾರರು ಸಹ ಹಣದೊಂದಿಗೆ ಹಾಜರಿದ್ದು, ತನಿಖಾಧಿಕಾರಿಗಳು ಹಿಂದಿನ ದಿವಸ ಹೇಳಿದ ಸೂಚನೆಗಳನ್ನು ಮತ್ತೊಮ್ಮೆ ದೂರುದಾರರಿಗೆ ಮತ್ತು ಪಂಚರಿಗೆ ತಿಳಿಸಿರುತ್ತಾರೆ. ದಾಳಿತಂಡದವರು ಪೋಲೀಸ್ ಠಾಣೆಯನ್ನು 09.40 ಕ್ಕೆ ಬಿಟ್ಟು, ಚನ್ನೇಶಪುರ ಹೊರ ವಲಯಕ್ಕೆ ಬಂದು ದೂರುದಾರರನ್ನು ಹಾಗೂ ನೆರಳು ಸಾಕ್ಷಿಯನ್ನು ಗ್ರಾಮ ಪಂಚಾಯತಿ ಕಚೇರಿ ಒಳಗಡೆ ಕಳುಹಿಸಿರುತ್ತಾರೆ. ನೆರಳು ಸಾಕ್ಷಿ ಹಾಗೂ ದೂರುದಾರರು ವಾಪಸ್ ಬಂದು ಗ್ರಾಮ ಪಂಚಾಯತಿಯಲ್ಲಿ ಎದುರುದಾರರು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ತನಿಖಾದಿಕಾರಿಯ ಸೂಚನೆ ಮೇರೆಗೆ ಎದುರುದಾರರಿಗೆ ದೂರುದಾರರು ಫೋನ್ ಮಾಡಲಾಗಿ, ಎದುರುದಾರರು ಹಿರೇಮಳಲಿ ಗ್ರಾಮ ಪಂಚಾಯತಿಯಲ್ಲಿ ಇರುವುದಾಗಿ ಮತ್ತು ಅಲ್ಲಿಗೆ ಬರುವಂತೆ ತಿಳಿಸಿರುತ್ತಾರೆ. ದಾಳಿತಂಡದವರು ಸರ್ಕಾರಿ ಜೀಪಿನಲ್ಲಿ ಹಿರೇಮಳಲಿ ಗ್ರಾಮ ಪಂಚಾಯತಿ ತಲುಪಿ ದೂರುದಾರರು ಹಾಗೂ ನೆರಳು ಸಾಕ್ಷಿಯನ್ನು ಗ್ರಾಮ ಪಂಚಾಯತಿ ಒಳಗಡೆ ಕಳುಹಿಸಿ, ದಾಳಿ ತಂಡದವರು ಮರೆಯಲ್ಲಿ ಗುಪ್ತವಾಗಿ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ದೂರುದಾರರು ಕಛೇರಿಯ ಒಳಗೆ ಹೋಗಿದ್ದು, ಎದುರುದಾರರು ಕಛೇರಿಯಲ್ಲಿ ಹಾಜರಿದ್ದು, ಹಣವನ್ನು ಕೊಡುವಂತೆ ಸಂಜ್ಞೆ ಮೂಲಕ ಕೇಳಿ, ದೂರುದಾರರಿಂದ ಹಣವನ್ನು ಪಡೆದುಕೊಂಡು ಎರಡು ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟಿನ ಎಡ ಹಿಂದಿನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಇದನ್ನು ನೆರಳುಸಾಕ್ಷಿಯು ಮರೆಯಲ್ಲಿ ನಿಂತು ವೀಕ್ಷಿಸಿರುತ್ತಾರೆ. ಸುಮಾರು 11.45 ಘಂಟೆ ಸಮಯದಲ್ಲಿ ಎದುರುದಾರರು ಹಣ ಪಡೆದುಕೊಂಡಿದ್ದು, ತಕ್ಷಣ ದೂರುದಾರರು ದಾಳಿತಂಡದವರಿಗೆ ತಲೆ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಿರುತ್ತಾರೆ. ದಾಳಿತಂಡದವರು ದೂರುದಾರರ ಹತ್ತಿರ ಬಂದು, ದೂರುದಾರರನ್ನು ವಿಚಾರಿಸಲಾಗಿ, ಅವರು ಎದುರುದಾರರನ್ನು ತೋರಿಸಿ, ಇವರೇ ತನ್ನಿಂದ ರೂ.2,000/- ಹಣವನ್ನು ಕೈ ಸಂಜ್ಞೆ ಮೂಲಕ ಕೇಳಿ ಪಡೆದುಕೊಂಡು ಎರಡು ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟ್ ಜೇಬಿನಲ್ಲಿ

ಇಟ್ಟುಕೊಂಡಿರುವುದಾಗಿಯು ಮತ್ತು ಕಂಪ್ಯೂಟರ್‌ನಿಂದ ಇ-ಸ್ವತ್ತು ನಮೂನೆಯನ್ನು ತೆಗೆದುಕೊಟ್ಟಿರುವುದಾಗಿ ನುಡಿದಿರುತ್ತಾರೆ. ಅದೇ ಪ್ರಕಾರ, ನೆರಳುಸಾಕ್ಷಿಯನ್ನು ಕೇಳಲಾಗಿ ತಾನು ಮರೆಯಲ್ಲಿ ನಿಂತು ಗಮನಿಸಲಾಗಿ ಎದುರುದಾರರು ಸಂಜ್ಞೆ ಮಾಡಿ ಹಣ ಪಡೆದುಕೊಂಡು ಎಣಿಸಿ ತನ್ನ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡ ಬಗ್ಗೆ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ತನಿಖೆಗೆ ಸಹಕರಿಸಲು ಸೂಚಿಸಿರುತ್ತಾರೆ. ದೂರುದಾರರು ಲಂಚ ನೀಡುವ ಕಾಲಕ್ಕೆ ನಡೆದ ಸಂಬಾಷಣೆಯನ್ನು ಕಂಪ್ಯೂಟರ್ ಮೂಲಕ ಸಿಡಿಗೆ ವರ್ಗಾಯಿಸಿರುತ್ತಾರೆ ಮತ್ತು ಸಂಭಾಷಣೆಯನ್ನು ಲಿಪಿಕರಿಸಿಕೊಂಡಿರುತ್ತಾರೆ. ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಎದುರುದಾರರ ಎರಡೂ ಕೈ ಬೆರಳುಗಳನ್ನು ತೊಳೆಯಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಎದುರುದಾರರು ತಮ್ಮ ಪ್ಯಾಂಟ್ ಜೇಬಿನಿಂದ ಹಣವನ್ನು ತೆಗೆದು ಹಾಜರುಪಡಿಸಿದ್ದು, ಸದರಿ ಹಣವನ್ನು ಪಂಚರು ಈ ಮೊದಲೇ ದಾಖಲಿಸಿಕೊಂಡ ನೋಟುಗಳ ನಂಬರ್‌ಗಳೊಂದಿಗೆ ತಾಳೆ ಮಾಡಿ ನೋಡಲಾಗಿ, ತಾಳೆ ಹೊಂದಿದ ಮೇರೆಗೆ ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ಬೇರೆ ಪಂಚೆಯ ವ್ಯವಸ್ಥೆ ಮಾಡಿ, ಹಣ ಇಟ್ಟುಕೊಂಡ ಪ್ಯಾಂಟಿನ ಹಿಂದಿನ ಎಡ ಜೇಬನ್ನು ತಿರುವಿ ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಕಾಗದ ಪತ್ರಗಳ ಬಗ್ಗೆ ಎದುರುದಾರರನ್ನು ವಿಚಾರಿಸಲಾಗಿ, ಕಾಗದ ಪತ್ರಗಳು ಚನ್ನೇಶಪುರ ಗ್ರಾಮ ಪಂಚಾಯತಿಯಲ್ಲಿವೆ ಎಂದು ತಿಳಿಸಿದ್ದು, ಅವುಗಳನ್ನು ಕಾರ್ಯದರ್ಶಿಯವರ ಮೂಲಕ ಪಡೆದುಕೊಂಡು, ಸದರಿ ಕಾಗದ ಪತ್ರಗಳ ನಕಲುಗಳನ್ನು ತಯಾರಿಸಿ ಅವುಗಳನ್ನು ಎದುರುದಾರರ ಹಿರಿಯ ಮೇಲಾಧಿಕಾರಿಯಾದ ಶ್ರೀ ಆನಂದಮೂರ್ತಿ, ಮ್ಯಾನೇಜರ್, ತಾಲ್ಲೂಕು ಪಂಚಾಯಿತಿ, ಚನ್ನಗಿರಿ ಇವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಸಮಾಜಾಯಿಷಿಯನ್ನು ಬರೆದುಕೊಡಲು ತಿಳಿಸಿದ್ದು, ಎದುರುದಾರರು **ಸಮಜಾಯಿಷಿಯಲ್ಲಿ ಬರೆದುಕೊಟ್ಟಿದ್ದೇನೆಂದರೆ, ದೂರುದಾರರು ಇ-ಸ್ವತ್ತನ್ನು**

**ತುರ್ತಾಗಿ ಮಾಡಿಕೊಡುವಂತೆ ಕೇಳಿಕೊಂಡಿದ್ದು, ತಾನು ಬೇಗ ಕೆಲಸ ಮಾಡಿಕೊಟ್ಟದ್ದಕ್ಕಾಗಿ ಮತ್ತು ತಮ್ಮ ಆತ್ಮ ತೃಪ್ತಿಗಾಗಿ ಹಣವನ್ನು ನನಗೆ ನೀಡಿರುತ್ತಾರೆ. ನಾನು ಲಂಚಕ್ಕೆ ಒತ್ತಾಯ ಮಾಡಿರುವುದಿಲ್ಲವೆಂದು ಬರೆದುಕೊಟ್ಟಿರುತ್ತಾರೆ**. ಸಮಜಾಯಿಷಿಯ ಬಗ್ಗೆ ದೂರುದಾರರನ್ನು ಹಾಗೂ ನೆರಳುಸಾಕ್ಷಿಯನ್ನು ಕೇಳಲಾಗಿ ಎದರುದಾರರು ಬರೆದುಕೊಟ್ಟ ಸಮಜಾಯಿಷಿಯು ಸಮಂಜಸವಾಗಿರುವುದಿಲ್ಲವೆಂದು ನುಡಿದಿರುತ್ತಾರೆ. ಎದುರುದಾರರ ಅಂಗ ಶೋಧನೆ ಮಾಡಲಾಗಿ ಎದುರುದಾರರ ಹತ್ತಿರ ಒಂದು ಮೊಬೈಲ್, ರೂ.1470/- ನಗದು, ಪಾನ್ ಕಾರ್ಡ್, ಆರ್.ಸಿ. ಕಾರ್ಡ್, ಇವುಗಳು ದೊರೆತ್ತಿದ್ದು, ಅವುಗಳನ್ನು ಎದುರುದಾರರ ಸುಪರ್ಧಿಗೆ ನೀಡಿರುತ್ತಾರೆ. ಲಂಚ ಬೇಡಿಕೆಯ ಸಂಭಾಷಣೆಯ ಆಯ್ದ ಭಾಗವನ್ನು ಲಿಪಿಕರಿಸಿ ಅದನ್ನು ಮೂರು ಬಾರಿ ಎದುರುದಾರರಿಂದ ಓದಿಸುವ ಮೂಲಕ ಎದುರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ. ಗೆ ವರ್ಗಾಯಿಸಿಕೊಂಡಿರುತ್ತಾರೆ. ಅದೇ ಪ್ರಕಾರ ಲಂಚ ಬೇಡಿಕೆಯ ಸಂಭಾಷಣೆಯ ಆಯ್ದ ಭಾಗವನ್ನು ಲಿಪಿಕರಿಸಿ ಅದನ್ನು ಮೂರು ಬಾರಿ ದೂರುದಾರರಿಂದ ಓದಿಸುವ ಮೂಲಕ ದೂರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿ.ಡಿ. ಗೆ ವರ್ಗಾಯಿಸಿಕೊಂಡಿರುತ್ತಾರೆ. ಶ್ರೀ ಜಿ. ಹೆಚ್. ರಂಗಪ್ಪ, ಪಿ.ಡಬ್ಲ್ಯೂ.ಡಿ. ಇಂಜನಿಯರ್ ರವರು ಪಕ್ಕಾ ನಕಾಶ ತಯಾರಿಸಲು ಸ್ಥಳದಲ್ಲಿ ಹಾಜರಿದ್ದು, ಕಚ್ಚಾ ನಕ್ಷೆ ತಯಾರಿಸಿಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 22/10/2020 ರಂದು ಮಧ್ಯಾಹ್ನ 12.00 ರಿಂದ 4.00 ಗಂಟೆವರೆಗೆ ಹಿರೇಮಳಲಿ ಗ್ರಾಮ ಪಂಚಾಯತಿ ಕಾರ್ಯಾಲಯದ ಕಛೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡು ಕೈ ಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದಾಗಿ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಎದುರುದಾರರ ಹಿರಿಯ ಅಧಿಕಾರಿಯಾದ ಶ್ರೀ ಆನಂದಮೂರ್ತಿ, ಮ್ಯಾನೇಜರ್, ತಾಲ್ಲೂಕು ಪಂಚಾಯತಿ, ಚನ್ನಗಿರಿ, ಇವರು ಲಂಚ ಬೇಡಿಕೆಯ ಸಂಭಾಷಣೆಯಲ್ಲಿಯ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ.

v) ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಲಯದ ಮುಂದೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಅಭಿಯೋಜನೆಗೊಳಿಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು ಪಡೆದುಕೊಂಡಿರುತ್ತಾರೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಜಾರಿ ಮಾಡಿದ್ದು, ಎದುರುದಾರರು ತಮ್ಮ ಪತ್ರ ದಿ: 21.01.2023 ರಂತೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ತಾನು ಉದ್ದೇಶಪೂರ್ವಕವಾಗಿ ಯಾವುದೇ ರೀತಿಯಲ್ಲೂ ಭ್ರಷ್ಟಾಚಾರ ಮಾಡಿಲ್ಲವೆಂದು ತನ್ನನ್ನು ಈ ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಸಿಲುಕಿಸಿರುತ್ತಾರೆಂದು ಬರೆದುಕೊಂಡಿದ್ದಾರೆ. ಆದ ಕಾರಣ ತನ್ನ ಮೇಲೆ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ನಿರಾಕರಿಸಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಈ ಹಂತದಲ್ಲಿ ಒಪ್ಪಲು ಯಾವುದೇ ಆಧಾರಗಳು ಇರುವುದಿಲ್ಲ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಪುರಾವೆಗಳನ್ನು ಪರಾಮರ್ಶಿಸಲಾಗಿ ಎದುರುದಾರರು ಭ್ರಷ್ಟಾಚಾರ ಮಾಡುವ ಮೂಲಕ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ, ಎದುರುದಾರರು ಎಸಗಿದ ದುರ್ನಡತೆಗೆ ಇಲಾಖಾ ವಿಚಾರಣೆ ನಡೆಸುವುದು ನ್ಯಾಯತಾ ದೃಷ್ಟಿಯಿಂದ ಅತೀ ಅವಶ್ಯವಿರುತ್ತದೆ.

5. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ದೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕ.ನಾ.ಸೇ. (ನಡತೆ) ನಿಯಮ 1966ರ ನಿಯಮ 3 (1) (i) to (iv) ಅನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಇಲಾಖಾ ವಿಚಾರಣೆಗೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರ **ಶ್ರೀ ಹನುಮಂತಪ್ಪ ಹಂಚಿನಮನೆ, ತಂದೆ ನಾಗಪ್ಪ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚನ್ನೇಶಪುರ ಗ್ರಾಮ ಪಂಚಾಯತಿ/ ಪ್ರಭಾರ ಹಿರೇಮಳಲಿ ಗ್ರಾಮ ಪಂಚಾಯಿತಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ,** (**ವಯೋ ನಿವೃತ್ತಿ ದಿನಾಂಕ:31/07/2042**) ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957,

ನಿಯಮ 14(ಎ)ರ ಅನ್ವಯ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

9/3/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು-1,
ಕರ್ನಾಟಕ ರಾಜ್ಯ, ಬೆಂಗಳೂರು.